# Akashvani : Bangalore
# National Bulletin In Kannada
# 07.09.2024 / 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**07.09.2024** **19.35 hrs**

**<><*<><>*><>**

<u>ಮುಖ್ಯಾಂಶಗಳು</u>

**೧. ಸಾಮಾಜಿಕ ಬದಲಾವಣೆ ತರುವಲ್ಲಿ ಶಿಕ್ಷಣ ಮಹತ್ವದ ಮಾಧ್ಯಮ - ಉಪರಾಷ್ಟ್ರಪತಿ ಜಗದೀಪ್ ಧನಕರ್**

**೨. ವಿಧಾನಸಭಾ ಚುನಾವಣೆ ನಂತರ ಜಮ್ಮು-ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ - ಗೃಹ ಸಚಿವ ಅಮಿತ್ ಶಾ**

**೩. ಸುಧಾರಿತ ರಕ್ಷಣಾ ಸಾಮರ್ಥ್ಯವುಳ್ಳ ಅಗ್ನಿ-೪ ಕ್ಷಿಪಣಿ ಯಶಸ್ವಿ ಉಡಾವಣೆ**

**೪. ದೇಶದಲ್ಲಿ ಕ್ರೀಡಾ ಮೂಲಸೌಕರ್ಯಗಳನ್ನು ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ - ಸಚಿವ ಮನ್ಸುಖ್ ಮಾಂಡವೀಯ**

**<><*<><>*><>**

ಸಮಾಜದ ನ್ಯೂನತೆಗಳನ್ನು ತೊಡೆದು ಹಾಕುವಲ್ಲಿ ಮತ್ತು ಬದಲಾವಣೆ ತರುವಲ್ಲಿ, ಶಿಕ್ಷಣ ಮಹತ್ವದ ಮಾಧ್ಯಮವಾಗಿದೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದ್ದಾರೆ. ಉತ್ತರ ಪ್ರದೇಶದ ಗೋರಖ್‌ಪುರ್‌ನಲ್ಲಿಂದು ಸೈನಿಕ ಶಾಲೆ ಉದ್ಘಾಟಿಸಿದ ಅವರು, ಸೋಲೇ ಗೆಲುವಿನ ಮೆಟ್ಟಿಲಾಗಿದ್ದು ವಿದ್ಯಾರ್ಥಿಗಳು ಆರಂಭಿಕ ವೈಫಲ್ಯಗಳಿಗೆ ಧೃತಿಗೆಡದೆ ಪ್ರಯತ್ನ ಮುಂದುವರಿಸಬೇಕು ಎಂದು ಸಲಹೆ ನೀಡಿದರು. ಪ್ರಸಕ್ತ ಭಾರತ ಪರಿವರ್ತನೆಯ ಯುಗದಲ್ಲಿದ್ದು ರಾಷ್ಟ್ರದ ಸಮಗ್ರತೆ ಮತ್ತು ಅಭಿವೃದ್ಧಿಗಾಗಿ ಹಲವು ಮಹತ್ವದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ; ಕಾಶ್ಮೀರದಲ್ಲಿ

೩೭೦ನೇ ವಿಧಿ ರದ್ದು ಸೇರಿದಂತೆ, ಹಲವು ಐತಿಹಾಸಿಕ ನಿರ್ಧಾರಗಳಿಂದ ದೇಶದ ಅಭಿವೃದ್ಧಿ ಚಿತ್ರಣ ಬದಲಾಗುತ್ತಿದೆ ಎಂದರು. ಗೋರಖ್‌ಪುರದಲ್ಲಿ ನೂತನವಾಗಿ ನಿರ್ಮಿಸಿರುವ ಸೈನಿಕ ಶಾಲೆಯ ಮೂಲಸೌಕರ್ಯ ವ್ಯವಸ್ಥೆಯನ್ನು ಶ್ಲಾಘಿಸಿದ ಉಪರಾಷ್ಟ್ರಪತಿ, ದೇಶದ ಇತರ ಸೈನಿಕ ಮತ್ತು ಮಿಲಿಟರಿ ಶಾಲೆಗಳಿಗೆ ಗೋರಖ್‌ಪುರ ಶಾಲೆ ಮಾದರಿಯಾಗಿದೆ ಎಂದರು.

**<><*<><>*><>**

’ವಿಕಸಿತ ಭಾರತ’ ಗುರಿ ತಲುಪುವಲ್ಲಿ ದೇಶದ ಯುವ ಜನರನ್ನು ಸಜ್ಜುಗೊಳಿಸುವ ಮಹತ್ವದ ಜವಾಬ್ದಾರಿ ಶಿಕ್ಷಕರದ್ದಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ದೆಹಲಿಯ ತಮ್ಮ ನಿವಾಸದಲ್ಲಿ ನಿನ್ನೆ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಶಿಕ್ಷಕರೊಂದಿಗೆ ಸಂವಾದ ನಡೆಸಿದ ಅವರು, ೨೦೪೭ರ ವೇಳೆಗೆ ವಿಕಸಿತ ಭಾರತ ನಿರ್ಮಾಣ ನಿಟ್ಟಿನಲ್ಲಿ ಸಮರ್ಥ ನಾಗರಿಕರು ಹಾಗೂ ಯುವಜನರನ್ನು ಸನ್ನದ್ಧಗೊಳಿಸುವುದು ಮಹತ್ವದ ಕಾರ್ಯ ಎಂದರು. ದೇಶದ ವಿವಿಧತೆ ಮತ್ತು ಅನನ್ಯ ಸಂಸ್ಕೃತಿಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಶಿಕ್ಷಕರು ಶೈಕ್ಷಣಿಕ ಪ್ರವಾಸಗಳನ್ನು ಹೆಚ್ಚಾಗಿ ಆಯೋಜಿಸಬೇಕೆಂದು ಕರೆ ನೀಡಿದ ಪ್ರಧಾನಿ, ಇದರಿಂದ ಪ್ರವಾಸೋದ್ಯಮ ಹಾಗೂ ಸ್ಥಳೀಯ ಆರ್ಥಿಕತೆಗೆ ನೆರವಾಗಲಿದೆ ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಭಾವ ಹಾಗೂ ಮಾತೃ ಭಾಷಾ ಮಾಧ್ಯಮದಲ್ಲಿ ಕಲಿಯುವುದರ ಮಹತ್ವ ಕುರಿತು ಪ್ರಧಾನಿ ಸಮಾಲೋಚನೆ ನಡೆಸಿದರು. ಸ್ಥಳೀಯ ಜಾನಪದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವಂತೆ ಕರೆ ನೀಡಿದ ಪ್ರಧಾನಿ, ಪ್ರಶಸ್ತಿ ಪುರಸ್ಕೃತ ಶಿಕ್ಷಕರು ಸಾಮಾಜಿಕ ಮಾಧ್ಯಮಗಳ ಮೂಲಕ ಪರಸ್ಪರ ಸಂಪರ್ಕದಲ್ಲಿದ್ದು, ಶಿಕ್ಷಣ ಕುರಿತಂತೆ ವಿಚಾರ ವಿನಿಮಯ ಮುಂದುವರಿಸಬೇಕು ಎಂದು ಸಲಹೆ ನೀಡಿದರು.

**<><*<><>*><>**

ವಿಧಾನಸಭಾ ಚುನಾವಣೆಯ ನಂತರ ಜಮ್ಮು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ ಪುನರ್ ಸ್ಥಾಪಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಮತ್ತು ಬಿಜೆಪಿ ಹಿರಿಯ ನಾಯಕ ಅಮಿತ್ ಶಾ ಹೇಳಿದ್ದಾರೆ. ಜಮ್ಮುವಿನಲ್ಲಿಂದು ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಮೈತ್ರಿಕೂಟ ಕಾಶ್ಮೀರದಲ್ಲಿ ಹಳೆಯ ವ್ಯವಸ್ಥೆ ವಾಪಸ್ ತರಲು ಯತ್ನಿಸುತ್ತಿವೆ ಎಂದು ಟೀಕಿಸಿದರು. ಜಮ್ಮು ಕಾಶ್ಮೀರದಲ್ಲಿ ಭಯೋತ್ಪಾದನಾ ಚಟುವಟಿಕೆ ಪ್ರಸ್ತುತ ಶೇಕಡ ೭೦ರಷ್ಟು ಕಡಿಮೆಯಾಗಿದೆ. ಆದರೆ ಭಯೋತ್ಪಾದನೆಯ ಜ್ವಾಲೆಯನ್ನು ಮತ್ತೆ ವ್ಯಾಪಕಗೊಳಿಸಲು ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಉದ್ದೇಶಿಸಿವೆ. ಎನ್‌ಡಿಎ ಸರ್ಕಾರ ಇದಕ್ಕೆ ಅವಕಾಶ ನೀಡುವುದಿಲ್ಲ. ಗುಜ್ಜರ್, ಪಹಾಡಿ, ಬಕೇರ್‌ವಾಲಾ ಮತ್ತು ದಲಿತರು ಸೇರಿದಂತೆ ಯಾವುದೇ ಸಮುದಾಯಕ್ಕೆ ಅನ್ಯಾಯವಾಗಲು ಆಸ್ಪದ ನೀಡುವುದಿಲ್ಲ ಎಂದು ತಿಳಿಸಿದರು. ಜಮ್ಮು ಕಾಶ್ಮೀರದಲ್ಲಿ ಇದೇ ೧೮ ರಿಂದ ಮೂರು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಅಮಿತ್ ಶಾ ಅವರು, ಎರಡು ದಿನಗಳ ಭೇಟಿಗಾಗಿ ನಿನ್ನೆ ಜಮ್ಮುವಿಗೆ ಆಗಮಿಸಿದ್ದರು.

<><*<><>*><>

ನಿಖರವಾಗಿ ಗುರಿ ತಲುಪುವ ಮತ್ತು ಸುಧಾರಿತ ರಕ್ಷಣಾ ಸಾಮರ್ಥ್ಯವುಳ್ಳ ಅಗ್ನಿ-೪ ಕ್ಷಿಪಣಿಯನ್ನು ಭಾರತ ನಿನ್ನೆ ಯಶಸ್ವಿಯಾಗಿ ಉಡಾವಣೆ ಮಾಡಿದೆ. ಒಡಿಶಾದ ಚಂಡೀಪುರ್‌ನಲ್ಲಿ ಪರೀಕ್ಷಾರ್ಥ ಉಡಾವಣೆ ನಡೆಸಲಾಗಿದ್ದು, ಈ ಕ್ಷಿಪಣಿ ಸುಮಾರು ೪ ಸಾವಿರ ಕಿಲೋಮೀಟರ್ ದೂರ ತಲುಪುವ ಸಾಮರ್ಥ್ಯ ಹೊಂದಿದೆ. ಇದರೊಂದಿಗೆ ದೇಶದ ರಕ್ಷಣಾ ಸಾಮರ್ಥ್ಯ ಬಲಪಡಿಸುವ ಬದ್ಧತೆಯನ್ನು ಮುಂದುವರೆಸಲಾಗಿದೆ ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ.

<><*<><>*><>

ದೇಶದಲ್ಲಿ ಭವಿಷ್ಯದ ಲಾಜಿಸ್ಟಿಕ್ಸ್ ವ್ಯವಸ್ಥೆ ನಿರ್ಮಿಸಲಾಗುತ್ತಿದ್ದು, ಮೂಲಸೌಕರ್ಯ ಮತ್ತು ಸಂಪರ್ಕ ಉತ್ತಮಪಡಿಸಲಾಗುತ್ತಿದೆ ಎಂದು ಕೇಂದ್ರ ಕೌಶಾಲ್ಯಾಭಿವೃದ್ಧಿ ಮತ್ತು

ಉದ್ಯಮಶೀಲತೆ ಖಾತೆ ರಾಜ್ಯ ಸಚಿವ ಜಯಂತ್ ಚೌಧರಿ ಹೇಳಿದ್ದಾರೆ. ಲಾಜಿಸ್ಟಿಕ್ಸ್ ಮತ್ತು ಕೌಶಾಲ್ಯಾಭಿವೃದ್ಧಿ ವಲಯದಲ್ಲಿ ಖಾಸಗಿ ಪಾಲುದಾರಿಕೆ ಒಪ್ಪಂದಕ್ಕೆ ಇಂದು ಸಹಿ ಹಾಕಿದ ಅವರು, ಜಾಗತಿಕ ವ್ಯಾಪಾರದಲ್ಲಿ ಭಾರತದ ಪಾಲು ಹೆಚ್ಚುತ್ತಿದ್ದು, ಇದರಿಂದ ೨೦೪೭ರ ವೇಳೆಗೆ ವಿಕಸಿತ ಭಾರತ ಗುರಿ ತಲುಪಲು ನೆರವಾಗಲಿದೆ ಎಂದರು. ಉದ್ಯಮ ವಲಯದಲ್ಲಿ ನೂತನ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಅಳವಡಿಸಲು ಕೌಶಲ್ಯವೃದ್ಧಿ ಅತ್ಯಗತ್ಯ ಎಂದು ಸಚಿವರು ಹೇಳಿದರು.

**<><*<><>*><>**

ಜಪಾನ್ ಪ್ರವಾಸದಲ್ಲಿರುವ ವಾರ್ತಾ ಮತ್ತು ಪ್ರಸಾರ, ರೈಲ್ವೆ, ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಅಶ್ವಿನಿ ವೈಷ್ಣವ್ ಟೋಕಿಯೋದಲ್ಲಿಂದು ಜಪಾನ್ ಹಣಕಾಸು ಸಚಿವ ಕೆನ್ ಸೈಟೊ ಅವರನ್ನು ಭೇಟಿಯಾದರು. ದ್ವಿಪಕ್ಷೀಯ ವ್ಯಾಪಾರ ಮತ್ತು ಸಹಕಾರ ಬಲವರ್ಧನೆ ಕುರಿತು ಸಮಾಲೋಚನೆ ನಡೆಯಿತು.

**<><*<><>*><>**

ಅಂತಾರಾಷ್ಟ್ರೀಯ ಸಮೀಕ್ಷಾ ಸಂಸ್ಥೆ ಮೋರ್ಗನ್ ಸ್ಟ್ಯಾನ್ಲಿ ವರದಿ ಅನುಸಾರ, ಪ್ರಸಕ್ತ ತಿಂಗಳಲ್ಲಿ, ಭಾರತ ಉದಯೋನ್ಮುಖ ಮಾರುಕಟ್ಟೆ-ಬಂಡವಾಳ ಮಾರುಕಟ್ಟೆ ಸೂಚ್ಯಂಕ –MSCI IMI ದಲ್ಲಿ ಚೀನಾವನ್ನು ಹಿಂದಿಕ್ಕಿ ಮುನ್ನಡೆದಿದೆ. ವರದಿಯ ಪ್ರಕಾರ, ಈ ಸೂಚ್ಯಂಕದಲ್ಲಿ ಭಾರತ ಶೇ. ೨೨.೨೭ ರಷ್ಟು ಏರಿಕೆ ಕಂಡಿದೆ. ಆದರೆ ಚೀನಾ ಶೇ. ೨೧.೫೮ ಕ್ಕೆ ಇಳಿದಿದೆ. MSCI IMI ಒಟ್ಟು ೩,೩೫೫ ಷೇರುಗಳನ್ನು ಒಳಗೊಂಡಿದ್ದು, ಇದು ೨೪ ಉದಯೋನ್ಮುಖ ಮಾರುಕಟ್ಟೆ ರಾಷ್ಟ್ರಗಳಾದ್ಯಂತ ವ್ಯಾಪ್ತಿ ಹೊಂದಿದೆ. ಸೂಚ್ಯಂಕದಲ್ಲಿನ ಮರುಸಮತೋಲನವು ವ್ಯಾಪಕವಾದ ಮಾರುಕಟ್ಟೆ ಪ್ರವೃತ್ತಿಗಳನ್ನು ಪ್ರತಿಬಿಂಬಿಸುತ್ತದೆ. ಆರ್ಥಿಕ ಅಡೆತಡೆಗಳಿಂದಾಗಿ ಚೀನಾದ ಮಾರುಕಟ್ಟೆಗಳು ಸಂಕಷ್ಟ ಎದುರಿಸುತ್ತಿರುವಾಗ, ಭಾರತದ ಮಾರುಕಟ್ಟೆಗಳು ಅನುಕೂಲಕರವಾದ ಸ್ಥೂಲ ಆರ್ಥಿಕ ಪರಿಸ್ಥಿತಿಗಳಿಂದ ಲಾಭ ಪಡೆದಿವೆ.

**<><*<><>*><>**

ಎನ್‌ಡಿಎ ಅಧಿಕಾರಾವಧಿಯಲ್ಲಿ, ಬಯಲು ಮಲವಿಸರ್ಜನೆಯನ್ನು ತೊಡೆದುಹಾಕಲಾಗಿದ್ದು, ಜಲಜೀವನ್ ಮಿಷನ್ ಅಡಿ ಕೊಳವೆ ನೀರಿನ ಪೂರೈಕೆಯ ವ್ಯಾಪ್ತಿಯನ್ನು ಶೇಕಡ ೧೬ ರಿಂದ ಶೇಕಡ ೭೮ ಕ್ಕೆ ಹೆಚ್ಚಿಸಲಾಗಿದೆ. ೧೧ ಕೋಟಿಗೂ ಹೆಚ್ಚು ಮನೆಗಳಿಗೆ ಅಡುಗೆ ಅನಿಲವನ್ನು ಒದಗಿಸಲಾಗಿದೆ ಎಂದು ಅಂತಾರಾಷ್ಟ್ರೀಯ ಸಂಸ್ಥೆಯೊಂದು ಬಿಡುಗಡೆಗೊಳಿಸಿದ ಇತ್ತೀಚಿನ ಸಂಶೋಧನಾ ಪ್ರಬಂಧದಲ್ಲಿ ಉಲ್ಲೇಖಿಸಲಾಗಿದೆ. ಈ ವರದಿಯ ಪ್ರಕಾರ, ಸ್ವಚ್ಛ ಭಾರತ ಅಭಿಯಾನದಡಿ, ಭಾರತದಲ್ಲಿ ಬಯಲು ಮಲವಿಸರ್ಜನೆಯನ್ನು ತೊಡೆದುಹಾಕಿರುವುದರಿಂದ ವಾರ್ಷಿಕವಾಗಿ ಸುಮಾರು ೬೦ ಸಾವಿರದಿಂದ ೭೦ ಸಾವಿರ ಶಿಶು ಮರಣಗಳನ್ನು ತಪ್ಪಿಸಲು ಸಹಾಯವಾಗಿದೆ. ೨೦೦೦ ದಿಂದ ೨೦೧೫ರ ಅವಧಿಗೆ ಹೋಲಿಸಿದರೆ ೨೦೧೫-೨೦೨೦ ರ ನಡುವೆ ಶಿಶುಮರಣ ಪ್ರಮಾಣ ಮೂರು ಪಟ್ಟು ಹೆಚ್ಚು ವೇಗದಲ್ಲಿ ಕಡಿಮೆಯಾಗಿದೆ. ಶಿಶುಮರಣ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ಸ್ವಚ್ಛ ಭಾರತ ಮಿಷನ್ ಮಹತ್ವದ ಕೊಡುಗೆ ನೀಡಿದೆ ಎಂಬುದನ್ನು ಈ ವರದಿ ಸೂಚಿಸಿದೆ.

<><*<><>*><>

ವನಸ್ಪತಿಯ ತಾಳೆ ಸಸಿ ನೆಡುವ ಬೃಹತ್ ಅಭಿಯಾನ-೨೦೨೪ರ ಅಂಗವಾಗಿ ಈವರೆಗೆ ದೇಶಾದ್ಯಂತ ೧೭ ಲಕ್ಷ ತಾಳೆ ಗಿಡಗಳನ್ನು ನೆಡಲಾಗಿದೆ. ರಾಷ್ಟ್ರೀಯ ವನಸ್ಪತಿ ತಾಳೆ ಗಿಡ ಅಭಿಯಾನವನ್ನು ಈ ವರ್ಷದ ಜುಲೈ ೧೫ ರಂದು ಜಾರಿಗೊಳಿಸಲಾಗಿದ್ದು, ಈವರೆಗೆ ಒಟ್ಟು ೧೫ ರಾಜ್ಯಗಳ ಸುಮಾರು ೧೨ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಗಿಡ ನೆಡಲಾಗಿದೆ. ದೇಶದಲ್ಲಿ ತಾಳೆ ಎಣ್ಣೆ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಸಹಯೋಗದೊಂದಿಗೆ ಈ ಅಭಿಯಾನ ಅರಂಭಿಸಲಾಗಿದೆ. ಕರ್ನಾಟಕ, ಆಂಧ್ರಪ್ರದೇಶ, ಛತ್ತೀಸ್‌ಗಢ, ಗೋವಾ, ಗುಜರಾತ್, ಕೇರಳ ಮುಂತಾದ ರಾಜ್ಯಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈ ತಿಂಗಳ ೧೫ರವರೆಗೆ ಅಭಿಯಾನ ಮುಂದುವರೆಯಲಿದೆ.

<><*<><>*><>

ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರದೇಶದಲ್ಲಿ ಭಯೋತ್ಪಾದಕರು ಮತ್ತು ಪಾಕಿಸ್ತಾನ ಸೇನಾಪಡೆ ನಡುವಿನ ಗುಂಡಿನ ಚಕಮಕಿಯಲ್ಲಿ ನಾಲ್ವರು ಆತ್ಮಹತ್ಯಾ ಬಾಂಬರ್‌ಗಳು ಹತರಾಗಿದ್ದಾರೆ ಎಂದು ವರದಿಯಾಗಿದೆ. ಮೊಹಮಂಡ್ ಜಿಲ್ಲೆಯಲ್ಲಿನ ಅರೆಸೇನಾಪಡೆ ಕೇಂದ್ರ ಕಚೇರಿ ಮೇಲೆ ನಾಲ್ವರು ಭಯೋತ್ಪಾದಕರು ದಾಳಿ ನಡೆಸಿದ ನಂತರ ಅಲ್ಲಿನ ಸೇನಾಪಡೆ ಪ್ರತಿದಾಳಿ ನಡೆಸಿದೆ. ಆ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಮುಂದುವರೆದಿದೆ ಎಂದು ವರದಿ ತಿಳಿಸಿದೆ.

<><*<><>*><>

ಒಡಿಶಾದ ಹಲವೆಡೆ ಹಾಗೂ ಆಂಧ್ರ ಪ್ರದೇಶ ಮತ್ತು ತೆಲಂಗಾಣದ ಕರಾವಳಿ ಭಾಗದಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರಾಜಸ್ಥಾನದ ಪೂರ್ವಭಾಗ ಮತ್ತು ಮಹಾರಾಷ್ಟ್ರದ ಮಧ್ಯಭಾಗದಲ್ಲಿ ಮುಂದಿನ ಮೂರು ದಿನಗಳ ಕಾಲ ಮಳೆಯಾಗಲಿದೆ. ಉತ್ತರಪ್ರದೇಶ, ಹರಿಯಾಣ, ಉತ್ತರಾಖಂಡ, ಗುಜರಾತ್, ಛತ್ತೀಸ್‌ಗಢ, ಗೋವಾ ಮತ್ತು ಕೊಂಕಣ ಭಾಗದಲ್ಲಿ ಇಂದು ರಾತ್ರಿ ಮಳೆಯಾಗುವ ಸಾಧ್ಯತೆಯಿದೆ. ಕರ್ನಾಟಕದ ದಕ್ಷಿಣ ಒಳನಾಡು ಮತ್ತು ಕರಾವಳಿ ಹಾಗೂ ಕೇರಳದಲ್ಲಿ ಇದೇ ೯ರವರೆಗೆ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಲಾಗಿದೆ.

<><*<><>*><>

ಈ ವರ್ಷದ ಪ್ರಬಲ ಚಂಡಮಾರುತ ’ಯಾಗಿ’ ವಿಯಟ್ನಾಂನ ಉತ್ತರ ಭಾಗದತ್ತ ಗಂಟೆಗೆ ೧೬೦ ಕಿಲೋಮೀಟರ್ ವೇಗದಲ್ಲಿ ಬೀಸುತ್ತಿದೆ. ಕರಾವಳಿಯಲ್ಲಿ ಸಮುದ್ರದ ಅಲೆಗಳು ಸುಮಾರು ೩ ಮೀಟರ್ ಎತ್ತರದಹೊರೆಗೆ ಅಪ್ಪಳಿಸುತ್ತಿದ್ದು, ಕೆಲವೆಡೆ ಭಾರೀ ಗಾಳಿಗೆ ಮರಗಳು ಉರುಳಿವೆ. ರಸ್ತೆಗಳಿಗೆ ನೀರು ಹರಿದು, ಜನಜೀವನ ಅಸ್ತವ್ಯಸ್ತಗೊಂಡಿದೆ. ವಿಯಾಟ್ನಾಂ ಸಮುದ್ರ ತೀರದಲ್ಲಿ ಸುಮಾರು ೧೨ ಮಂದಿ ನಾಪತ್ತೆಯಾಗಿರುವುದಾಗಿ ವರದಿಯಾಗಿದೆ. ’ಯಾಗಿ’ ಚಂಡಮಾರುತದಿಂದ ಫಿಲಿಪೈನ್ಸ್‌ನಲ್ಲಿ ಈಗಾಗಲೇ ೧೬ ಮಂದಿ ಮೃತಪಟ್ಟಿರುವುದಾಗಿ ವರದಿಯಾಗಿದೆ.

<><*<><>*><>

ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಉತ್ತಮ ಸಾಧನೆ ತೋರಿ ಸ್ವದೇಶಕ್ಕೆ ಹಿಂದಿರುಗಿದ ಕ್ರೀಡಾಪಟುಗಳಿಗೆ ದೆಹಲಿಯಲ್ಲಿಂದು ಕೇಂದ್ರ ಕ್ರೀಡಾ ಸಚಿವ ಮನ್ಸೂಖ್ ಮಾಂಡವೀಯ ಸನ್ಮಾನಿಸಿದರು. ಚಿನ್ನದ ಪದಕ ವಿಜೇತೆ ಅವನಿ ಲೇಖರ, ಬೆಳ್ಳಿ ಪದಕಗಳನ್ನು ಗೆದ್ದ ಮನೀಶ್ ನರ್ವಾಲ್ ಮತ್ತು ಪ್ರಣವ್ ಸೂರ್ಮಾ, ಕಂಚಿನ ಪದಕಗಳನ್ನು ಗೆದ್ದ ಮೋನಾ ಅಗರ್‌ವಾಲ್, ರುಬಿನಾ ಫ್ರಾನ್ಸಿಸ್ ಮತ್ತು ರಾಕೇಶ್ ಕುಮಾರ್ ಅವರನ್ನು ಸನ್ಮಾಸಲಾಯಿತು.

ಬಳಿಕ ಸಚಿವ ಮನ್ಸೂಖ್ ಮಾಂಡವೀಯ, ಕ್ರೀಡಾಪಟುಗಳು ಮತ್ತು ತರಬೇತುದಾರರಿಗೆ ಎಲ್ಲ ಬಗೆಯ ಅಗತ್ಯ ಸೌಲಭ್ಯಗಳು ಮತ್ತು ಆಧುನಿಕ ವ್ಯವಸ್ಥೆ ಒದಗಿಸಲು ಸರ್ಕಾರ ಬದ್ಧ ಎಂದರು. ದೇಶದ ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರಲು ಅನುಕೂಲವಾಗುವಂತೆ ಕ್ರೀಡಾ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಅವರು ಹೇಳಿದರು. ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಈವರೆಗೆ ೭ ಚಿನ್ನ, ೯ ಬೆಳ್ಳಿ ಮತ್ತು ೧೨ ಕಂಚಿನ ಪದಕಗಳೊಂದಿಗೆ ಒಟ್ಟು ೨೮ ಪದಕಗಳನ್ನು ಗೆದ್ದು, ಐತಿಹಾಸಿಕ ಸಾಧನೆ ಮಾಡಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೮.೦೫ ಕ್ಕೆ <>*><>**